OS 305/2023
PW- 3

ಈ ದಿನ ದಿನಾಂಕಃ 06-03-2026 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ  ಪ್ರತಿವಾದಿ ಪರ ಶ್ರೀ ಹೆಚ್ ಟಿ ವಕೀಲರಿಂದಃ**

ವಾದಿ ನನ್ನ ಸಂಬಂಧಿಕರು ಎಂದರೆ ಸರಿಯಲ್ಲ. ನಮ್ಮಜನಾಂದವರು ಎಂದರೆ ಸರಿ.ಈ ದಾವೆಯನ್ನುಯಾವ ಸರ್ವೆ ನಂಬರಿಗಾಗಿ ಹೂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಸಲ್ಲಿಸಿರುವ ಮುಖ್ಯ ವಿಚಾರಣಾ ಪ್ರ.ಪತ್ರದಲ್ಲಿ ನಮೂದಿಸಿದ ಸಂಗತಿಗಳಿಗೆ ಮಾಹಿತಿಯನ್ನು ವಾದಿ ಕೊಟ್ಟಿರುತ್ತಾರೆ. ಹಾಗಾಗಿ ಅದರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ. ದಾವಾಸ್ತಿ ಚೆಕ್ಕುಬಂದಿಯಲ್ಲಿ ನನಗೆ ಸೇರಿದ ಯಾವುದೇ ಜಮೀನು ಇಲ್ಲ ಎಂದರೆ ಸರಿ. ನಾನು ಮಾನಾಚಾರಿ ಮತ್ತು ಶಾರದಮ್ಮನವರನ್ನು ನೋಡಿರುತ್ತೇನೆ. ಸದರಿಯವರು ತರೀಕೆರೆಯವರು ಎಂದರೆ ನನಗೆಗೊತ್ತಿಲ್ಲ, ನಿಪಿ-1 ಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿಲ್ಲ ಎಂದರೆ ಸರಿ. ಹಾಗಾಗಿ ನನಗೆ ಸದರಿ ಪತ್ರದಲ್ಲಿ ಬರೆದವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ. ವಾದಿ ಮತ್ತು ಮಾನಾಚಾರಿಯವರು ಬೇರೆ ಬೇರೆ ಜನಾಂಗದವರು ಎಂದರೆ ಸರಿ. ವಾದಿ ಸೋಮ್ಲಾಪುರದಲ್ಲಿ ವಾಸವಿದ್ದರು ಎಂದರೆ ಸರಿಯಲ್ಲ. ವಾದಿ ಗಂಡುಗನಹಂಕಕಲು ಗ್ರಾಮದಲ್ಲಿವ ವಾಸವಿದ್ದಾರೆ ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ನೋಡಿಲ್ಲ, ಹಾಗಾಗಿ ವಾದಿ ಇಂದಿಗೂ ಸಹ ಸೋಮ್ಲಾಪುರದಲ್ಲಿ ವಾಸವಿದ್ದಾರೆ ಎಂದರೆ ಸಾಕ್ಷಿ ಸದರಿ ಊರು ವಾದಿಯ ತವರುಮನೆ ಎಂದು ನುಡಿಯುತ್ತಾರೆ.

2. ದಾವಾಸ್ತಿ ಮಂಜೂರಾದ ಕಾಲಕ್ಕೆ ಮಾನಾಚಾರಿ ಮತ್ತು ಅವರ ಕುಟುಂಬಸ್ಥರೇ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ಸದರಿ ಅನುಭವದಅಧಾರದ ಮೇಲೆ ಮಾನಚಾರಿಯವರಿಗೆ ಸರ್ಕಾರದವರು ಮಂಜೂರು ಮಾಡಿರುತ್ತಾರೆ ಎಂದರೆ ಸಾಕ್ಷಿ ಮಾಡಿರಬಹುದು ಎಂದು ನುಡಿಯುತ್ತಾರೆ. ವಾದಿ ಮತ್ತು ನಾನು ಒಂದೇ ಜನಾಂಗದವರಾದ ಕಾರಣ ನನಗೆ ದಾವೆಯ ಕುರಿತು ಯಾವುದೇ ಮಾಹಿತಿ ಇಲ್ಲದರೆ ಇದ್ದರು ಸಹ ಅವರಿಗೆ ಸಹಾಯ ಮಾಡಲು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮಾನಾಚಾರಿಯವರ ಮಗ ಯಾರು ಎಂದು ನನಗೆ ಗೊತ್ತಿಲ್ಲ. ವಾದಿಈ ದಾವೆಯನ್ನು ಯಾರ ವಿರುದ್ಧ ಹೂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಹಾಗಾಗಿ ನನಗೆ ಈ ಪ್ರಕರಣದ ಕುರಿತ ಯಾವುದೇ ಮಾಹಿತಿ ಇಲ್ಲದೆ ಇದ್ದರು ಸಹ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಎಂದರೆ ಸರಿಯಲ್ಲ. ಹಾಗಾಗಿ ದಾವಾಸ್ತಿ ಮಾನಾಚಾರಿಗೆ ಮಂಜೂರಾದಕಾರಣ ಆತ ಮೃತಪಟ್ಟ ತರುವಾಯ ಅತನ ವಾರಸುದಾರರಿಗೆ ಸೇರಬೇಕು ಎಂದರೆ ಸರಿ. ಸಾಕ್ಷಿ ಮುಂದುವರೆದು ವಾದಿ ವಿಲ್ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಹಾಗಾಗಿ ಮಾನಾಚರಿಯವರು ಯಾವುದೇ ನಿಪಿ-1 ನ್ನು ಬರೆದಿಲ್ಲ ಎಂದರೆ ಸರಿಯಲ್ಲ. ನಿಪಿ-1 ಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)** **ಓ.ಹೇ.ಕೇ. ಸರಿ ಇದೆ.**

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.